

ಶಶಿಧರ ಹಳೇಮನಿ

# ಬರುವಾಗಲೂ ಬರಿಗೈ ಹೋಗುವಾಗಲೂ ಬರಿಗೈ

■ ವಿ. ವಿಜಯೇಂದ್ರ ರಾವ್

ಮಹಾ ದಂಡನಾಯಕನಾದ ಅಲೆಗ್ಸಾಂಡರ್ ತನ್ನ ದಂಡಯಾತ್ರೆಯನ್ನೆಲ್ಲಾ ಮುಗಿಸಿ ಇಡೀ ವಿಶ್ವವನ್ನೇ ಗೆದ್ದ ಸಂಭ್ರಮದಲ್ಲಿದ್ದಾಗ ನಡೆದ ಒಂದು ಘಟನೆ. ಅವನ ಚಿತ್ತವನ್ನೇ ಕಲಕಿ ತನ್ನ ಕಡೆಯ ಕಾಲದಲ್ಲಿ ಅವನ ಶವಪೆಟ್ಟಿಗೆಯ ಎರಡು ಬದಿಯಲ್ಲಿ ದೊಡ್ಡ ತೂತನ್ನು ಮಾಡಿ ಅದರ ಮೂಲಕ ಅವನ್ನೆರಡೂ ಕೈಗಳು ಹೊರ ಚಾಚಿ ನಾನು ಈ ಪ್ರಪಂಚದಿಂದ ಏನನ್ನೂ ಕೊಂಡುಹೋಗಿಲ್ಲ, ಬರೀ ಕೈಯಲ್ಲಿ ನಿರ್ಗಮಿಸಿದ್ದೇನೆ ಎಂದು ವಿಶ್ವಕ್ಕೆ ತಿಳಿಸಿ ಎಂದು ಹೇಳಿದ ವಿಷಯ ನಿಮಗೆಲ್ಲಾ ಗೊತ್ತು. ಆದರೆ, ಅವನು ಈ ನಿರ್ಣಯಕ್ಕೆ ಬರಲು ಏನು ಕಾರಣವೆಂದು ಬಹಳ ಜನರಿಗೆ ಗೊತ್ತಿಲ್ಲ. ಅದು ಏಕೆಂದರೆ....

ಒಮ್ಮೆ ಅವನು ಹೀಗೆ ಭರತಖಂಡದಲ್ಲಿ ತನ್ನ ವಿಜಯ ಪತಾಕೆ ಹಾರಿಸುತ್ತಾ ಇದ್ದ ಸಮಯದಲ್ಲಿ, ಒಂದು ಹಳ್ಳಿಯ ಬಳಿ ಬಂದಾಗ ಅಲ್ಲಿ ಪಂಚಾಯತಿ ನಡೆಯುತ್ತಾ ಇತ್ತು. ಇದೇನು ಮಾಡುತ್ತಾ ಇದ್ದಾರೆ ಅಂತ ತನ್ನ ಮಂತ್ರಿಯಲ್ಲಿ ಕೇಳಿದಾಗ, ಅವರು ಇದು ಗ್ರಾಮದಲ್ಲಿನ ನ್ಯಾಯಾಲಯ. ಇಲ್ಲಿನ ಹಿರಿಯರು ಕೊಡುವ ತೀರ್ಪಿಗೆ ಎಲ್ಲರೂ ಬದ್ಧರಾಗಿರುತ್ತಾರೆ ಎಂದರು. ಸರಿ, ಹಾಗಾದರೆ ಮರೆಯಲ್ಲಿ ನಿಂತು ನೋಡೋಣವೆಂದು ಬಯಸಿ ಅಲ್ಲೇ ನಿಂತನು.

ಆ ಊರಿನ ಒಬ್ಬರು ತನ್ನ ಜಮೀನನ್ನು ಇನ್ನೊಬ್ಬರಿಗೆ ಮಾರಿದ್ದರು. ಕೊಂಡ ವ್ಯಕ್ತಿಯು ತಾನು ಜಮೀನನ್ನು ಉತ್ತುವಾಗ ನನಗೆ ಭೂಮಿಯಡಿಯಲ್ಲಿ ಒಂದು ಚಿನ್ನದ ನಾಣ್ಯವಿರುವ ಕೊಡವು ಸಿಕ್ಕಿತು. ಆದರೆ, ಇದು ನ್ಯಾಯವಾಗಿ ಇದನ್ನು ಮಾರಿದವರಿಗೆ ಸೇರಬೇಕು. ನಾನು ಜಮೀನನ್ನಷ್ಟೇ ಕೊಂಡದ್ದು, ಇದರ ಕೆಳಗಿದ್ದದ್ದು ಅವರದೇ ಇರಬೇಕು, ಆದ್ದರಿಂದ ಅವರಿಗೆ ಸೇರಬೇಕು ಎಂದು ವಾದಿಸುತ್ತಿದ್ದನು, ಇದನ್ನು ಮಾರಿದವನು.

ನಾನು ಒಮ್ಮೆ ಜಮೀನನ್ನು ಮಾರಿದ ಮೇಲೆ ಮುಗಿಯಿತು, ಇದರ ಪೂರ್ತಿ ಹಕ್ಕು ಅವರದೇ, ಆದ್ದರಿಂದ ಅದು ಭೂಮಿಯ ಒಳಗಿದ್ದರೂ ಸಹ ಅದರ ಪೂರ್ಣ ಹಕ್ಕುದಾರ ಅವರೇ ಎಂದು ವಾದಿಸುತ್ತಿದ್ದನು. ಅದನ್ನು ಗಮನಿಸುತ್ತಿದ್ದ ಅಲೆಗ್ಸಾಂಡರ್‌ಗೆ ಆಶ್ಚರ್ಯವೋ ಆಶ್ಚರ್ಯ. ಅಲ್ಲಾ, ಪ್ರಪಂಚದ ಬೇರೆ ಎಲ್ಲಾ ಕಡೆ ಆಸ್ತಿ ಕಂಡರೆ ಸಾಕು ತನಗೆ ಬೇಕು ಎಂದು ಹೊಡೆದಾಡುತ್ತಾರೆ. ಆದರೆ, ಇಲ್ಲಿ ಸಿಕ್ಕಿರುವ ಆಸ್ತಿ ತನ್ನದಲ್ಲಾ ಅಂತ ವಾದಿಸುತ್ತಿದ್ದಾರೆ ಎಂದು ಭ್ರಮಿತಗೊಂಡ. ಇದನ್ನು ಕಂಡು ಅವನಲ್ಲೂ ಮನಃ ಪರಿವರ್ತನೆಯಾಗಿ, ನಾನು ಯಾರಿಗಾಗಿ ಇಷ್ಟೊಂದು ದೇಶ ಗೆದ್ದು ಬರುತ್ತಿದ್ದೇನೆ. ಕೊನೆಗೆ ಒಂದು ದಿವಸ ಎಲ್ಲರೂ ಬರಿಗೈಯಲ್ಲಿ ಇಲ್ಲಿಂದ ಮರಳುವವರೆ ಎಂಬ ಜ್ಞಾನೋದಯವು ಅವನಿಗಾಗಿ, ಒಂದು ವೇಳೆ ನಾನು ಮೊದಲೇ ಭರತಖಂಡಕ್ಕೆ ಬಂದಿದ್ದರೆ ಚೆನ್ನಾಗಿತ್ತೇನೊ ಅಂತ ಅವನಿಗೆ ಅನಿಸಿ, ಇಲ್ಲಿಯ ಜನರ ವಿದ್ಯೆ, ವಿನಯ, ಸಂಸ್ಕಾರ ಮುಂತಾದವುಗಳಿಗೆ ಮನಸೋತು ಮನಸಾರೆ ಭಾರತಮಾತೆಗೆ ನಮಿಸಿ, ಅಲ್ಲಿಂದ ನಿರ್ಗಮಿಸುವಾಗ 'ಬರುವಾಗ ಬರಿಗೈ, ಹೋಗುವಾಗ ಬರಿಗೈ' ಸಿದ್ಧಾಂತವನ್ನು ಅಳವಡಿಸಿಕೊಳ್ಳುವೆನು ಎಂಬ ಧೃಡ ನಿಶ್ಚಯ ಮಾಡಿದನು. ಮುಂದಿನ ಇತಿಹಾಸ ನಿಮಗೆ ಗೊತ್ತಲ್ವೇ ಮಕ್ಕಳೇ...! ■

